# 1. ಕುಗ್ರಾಮದ ಮಾದರಿ ಶಾಲೆ, ಸಕಿಪ್ರಾ ಶಾಲೆ ನೀರೇರಿ.......

ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲೂಕಿನ ಮಾರುತಿಪುರ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ನೀರೇರಿ ತಲೆಯೆತ್ತಿ ನಿಂತಿದೆ. ಇದು ರಾಜ್ಯದ ಮೂಲೆ ಮೂಲೆಗಳಿಂದ ಜನರನ್ನು ತನ್ನದೇ ಆದ ವಿಶೇಷತೆಗಳಿಂದ ಸೆಳೆಯುತ್ತಿದೆ. ಈ ಶಾಲೆಯಲ್ಲಿ ಪ್ರಸ್ತುತ ಇಬ್ಬರು ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆ. ಶ್ರೀ ಗಜಾನನ ಎಮ್. ಎನ್. ಮತ್ತು ಶ್ರೀಮತಿ ಶೃತಿ ಹೆಚ್ ಇವರ ಗರಡಿಯಲ್ಲಿ ಪ್ರಸ್ತುತ 29 ಮಕ್ಕಳು ಸರ್ವಾಂಗೀಣ ಅಭಿವೃದ್ಧಿ ಹೊಂದುತ್ತಿದ್ದಾರೆ. ಅಡುಗೆ ಸಿಬ್ಬಂದಿಯವರಾದ ಶ್ರೀಮತಿ ಸಾವಿತ್ರಮ್ಮ ಮತ್ತು ಶ್ರೀಮತಿ ರತ್ನಮ್ಮರವರ ಕಾಳಜಿಯೂ ಶಾಲೆ ಈ ಮಟ್ಟಕ್ಕೆ ಬೆಳೆಯಲು ಸಹಕಾರಿಯಾಗಿದೆ.

ಕ್ರಿಯಾಶೀಲ ಎಸ್. ಡಿ. ಎಮ್. ಸಿ. ಅಧ್ಯಕ್ಷರಾದ ಶ್ರೀ ಜಿ. ಸದಾಶಿವ ಹಾಗೂ ಊರಿನ ಪೋಷಕರ ನೆರವು ಕಾಳಜಿ ಸಹಕಾರ ಶಾಲೆಯ ಉಳಿವಿಗೆ ಕಾರಣವಾಗಿದೆ. ಇದರ ಫಲವಾಗಿಯೇ ಶಾಲೆಯ ಮೂಲೆ ಮೂಲೆಯು ಮಕ್ಕಳಿಗೆ ಜ್ಞಾನ ಒದಗಿಸುವುದರ ಜೊತೆಗೆ ಶಿಸ್ತನ್ನು ಪಾಲಿಸುವಂತೆ ಮಾಡಿದೆ. ಇಲ್ಲಿನ ಮಕ್ಕಳು ಶಿಸ್ತಿನ ಸಿಪಾಯಿಗಳೆಂದರೆ ತಪ್ಪಾಗಲಾರದು. ಮುಖ್ಯ ಶಿಕ್ಷಕರಾದ ಗಜಾನನರವರ ಕನಸನ್ನು ನನಸು ಮಾಡಲು ಸಹಕರಿಸಿದ ಸ. ಶಿ. ಶೃತಿರವರ ಕಾರ್ಯ ವೈಖರಿಯಿಂದ ಶಾಲೆ ವಿಶೇಷತೆಗಳ ಆಗರವಾಗಿ ಈಗ ನಮ್ಮ ಮುಂದಿದೆ. ಇಲ್ಲಿನ ವಿದ್ಯಾರ್ಥಿಗಳ ಸುಂದರ ಬರವಣಿಗೆ, ಶಾಲೆಯ ಕುರಿತಾದ ಅಭಿಮಾನ, ಅತಿಥಿಗಳನ್ನು ಪ್ರೀತಿಯಿಂದ ಮಾತನಾಡಿಸುವ ಪರಿ, ಶಾಲೆಯ ಜವಾಬ್ದಾರಿ ನಿರ್ವಹಣೆ ಎಲ್ಲರನ್ನು ನಿಬ್ಬೆರಗಾಗುವಂತೆ ಮಾಡುತ್ತದೆ.

### ಧನ್ವಂತರಿ ವನ:

ಶಾಲಾವರಣದಲ್ಲಿ 250ಕ್ಕೂ ಹೆಚ್ಚು ಔಷಧೀಯ ಗಿಡಗಳನ್ನು ನೆಟ್ಟು ಪೋಷಿಸಿದ್ದಾರೆ. ಮಕ್ಕಳಿಗೆ ಅನಾರೋಗ್ಯದ ಸಮಯದಲ್ಲಿ ಸ್ಥಳೀಯವಾಗಿ ಸಿಗುವ ಗಿಡಮೂಲಿಕೆಗಳಿಂದ ಉಪಚರಿಸುತ್ತಾರೆ. ಮಕ್ಕಳಿಗೆ ಔಷಧೀಯ ಸಸ್ಯಗಳ ಉಪಯೋಗವನ್ನು ಈ ವಯಸ್ಸಿನಲ್ಲಿಯೇ ತಿಳಿಸುವ ಪ್ರಯತ್ನ ಮಾಡುತ್ತಿದ್ದಾರೆ. ಕೆನರಾ ಬ್ಯಾಂಕ್ ಹೊಸನಗರ ಶಾಖೆಯು ಔಷಧೀಯ ಸಸ್ಯಗಳಿಗೆ ನಾಮಫಲಕವನ್ನು ಒದಗಿಸಿದ್ದು, ಸಸ್ಯಗಳ ವಿವರ ಮತ್ತು ಉಪಯೋಗಗಳನ್ನು ಒಳಗೊಂಡ ಕೈಪಿಡಿಯನ್ನು ಶಾಲೆಯವರೇ ತಯಾರಿಸಿರುತ್ತಾರೆ.

### ಸುಂದರ ಕೈತೋಟ:

ಶಾಲೆಯ ಮುಂಭಾಗದಲ್ಲಿ ನಿರ್ಮಿಸಿರುವ ಸುಂದರವಾದ ಕೈತೋಟ ಮನಸೆಳೆಯುವಂತಿದೆ. ವಿವಿಧ ಜಾತಿಯ ಹೂವಿನ ಗಿಡಗಳು, ಅಲಂಕಾರಿಕ ಸಸ್ಯಗಳು, ತರಕಾರಿ ಗಿಡ-ಬಳ್ಳಿಗಳಿದ್ದು, ಕೈತೋಟಕ್ಕೆ ಹೊಂದಿಕೊಂಡಂತೆ, ನೀರಿನ ತೊಟ್ಟಿ, ವೈಜ್ಞಾನಿಕ ಮನೋಭಾವ ಬೆಳೆಸುವ ಸೈಕಲ್ ತುಳಿದರೆ ನೀರೆತ್ತುವ ಪಂಪ್, ದೇವಾಲಯದಂತಿರುವ ಸರಸ್ವತಿ ಪ್ರತಿಮೆ, ಜಲಪಾತದ ಮಾದರಿ, ಜೈವಿಕ ಕ್ರಿಯೆಗೆ ಎರೆಹುಳು ಗೊಬ್ಬರದ ತಯಾರಿ ಘಟಕ, ಸೋಲಾರ್ ಪಂಪ್, ಪೈಪ್ ಬಳಸಿ ಬಿಸಿಲಿನ ಶಾಖದಿಂದ ಬಿಸಿನೀರು ತಯಾರಿಕೆ, ಸ್ಥಳೀಯ ವಸ್ತುಗಳಿಂದ ತಯಾರಿಸಿದ ಆಸನಗಳು ಮೊದಲಾದ ಮಾದರಿಗಳು ಆಕರ್ಷಣೀಯವಾಗಿವೆ.

### ಬಾಲವನ:-

ಮಕ್ಕಳ ಬಿಡುವಿನ ವೇಳೆಯ ಸದುಪಯೋಗಕ್ಕೆ ಶಾಲಾವರಣದಲ್ಲಿ ಬಾಲವನವಿದೆ. ಜಾರುಬಂಡಿ ಮತ್ತು ಜೋಕಾಲಿ, ಏತಬಾತ, ಮಕ್ಕಳ ಮನೋಸ್ಥೈರ್ಯ ಹೆಚ್ಚಿಸುವ ಸಾಹಸದ ಹಗ್ಗದ ಆಟಗಳು, ಚೆಸ್, ಕೇರಂ, ಅಳೆಗುಣಿಮನೆ, ವಾಲಿಬಾಲ್, ಥ್ರೋಬಾಲ್ ಸೇರಿದಂತೆ ನೂರಾರು ಆಟಿಕೆ ವಸ್ತುಗಳು ಶಾಲೆಯಲ್ಲಿವೆ.

### ಸರ್ವಾಂಗೀಣ ಶಿಕ್ಷಣ:-

ಇಲಾಖೆಯ ಪಠ್ಯಕ್ರಮದ ಜೊತೆಯಲ್ಲಿ ಇದಕ್ಕೆ ಪೂರಕವಾದ ಹತ್ತಾರು ಶೈಕ್ಷಣಿಕ ಚಟುವಟಿಕೆಗಳನ್ನು ಶಾಲೆಯಲ್ಲಿ ಅಳವಡಿಸಿಕೊಳ್ಳಲಾಗಿದೆ. ಮುಕ್ತ, ತೆರೆದ ಗ್ರಂಥಾಲಯದಲ್ಲಿ 1400ಕ್ಕೂ ಹೆಚ್ಚು ಪುಸ್ತಕಗಳನ್ನು ಸಂಗ್ರಹಿಸಲಾಗಿದೆ. ನಿರಂತರ ವಿದ್ಯುತ್‌ಗಾಗಿ ಇನ್ವರ್ಟರ್ ವ್ಯವಸ್ಥೆ, ಸುಸಜ್ಜಿತ ತರಗತಿ ಕೊಠಡಿ ಮತ್ತು ಪೀಠೋಪಕರಣಗಳು, ತರಗತಿ ಒಳಗೆ, ಕಲಿಕೆಗೆ

ಬೇಕಾದ ಮಾಹಿತಿ ಚಾರ್ಟಗಳು, ನಿಸರ್ಗದಲ್ಲಿ ಕಲಿಕೆಗಾಗಿ ಕುಟೀರಗಳು, ಲ್ಯಾಮಿನೇಶನ್ ಮಾಡಿದ ವಿವಿಧ ಬಗೆಯ ಕಲಿಕಾ ಕಾರ್ಡುಗಳು, ಅವಧಿಯ ನಂತರ spoken english, ಭಯ ಮುಕ್ತ ಶಾಲಾವರಣ, ಮಕ್ಕಳಿಗೆ ಉಚಿತ ಸೋಲಾರ್ ದೀಪ, ಶೈಕ್ಷಣಿಕ ವಸ್ತುಗಳ ಅಂಗಡಿ, ವಿಜ್ಞಾನ ಪ್ರಯೋಗಾಲಯದ ಪರಿಚಯದ ಜೊತೆಯಲ್ಲಿ ಯೋಗಾಸನ ತರಬೇತಿ, ಸ್ಥಳೀಯರಿಂದ ಸಂಗೀತ ತರಬೇತಿ, ದಿನಕ್ಕೊಂದು ಗಾದೆ ಒಗಟು ವಿಶ್ಲೇಷಣೆ, ವಾರಕ್ಕೊಂದುದಿನ ಕ್ರಾಫ್ಟ್, ರಸಪ್ರಶ್ನಾವಳಿಗಳು, ಆಂಗ್ಲಪದ ಪರಿಚಯ, ಮಕ್ಕಳಿಂದಲೇ ಕಾರ್ಯಕ್ರಮ ನಿರ್ವಹಣೆ, ವಿಶೇಷ ನಲಿ–ಕಲಿ ವಾಲ್ ಸ್ಲೇಟ್, ಸುಂದರ ಸಮವಸ್ತ್ರದ ಜೊತೆಗೆ ಬ್ಲೇಸರ್, ಮಕ್ಕಳ ದೈಹಿಕ ಬೆಳವಣಿಗೆಗೆ ಮೊಳಕೆ ಕಟ್ಟಿದ ಕಾಳು ವಿತರಣೆ, ಮಾನಸಿಕ ಬೆಳವಣಿಗೆಗೆ ಧ್ಯಾನ ಸಂಸ್ಕೃತಿ ಉಳಿವಿಗಾಗಿ ಶ್ಲೋಕಗಳು, ಭಗವದ್ಗೀತಾ ಪಠಣ, ಸಾಂಸ್ಕೃತಿಕ ಚಟುವಟಿಕೆಗೆ ಸಹಕಾರಿಗೆ ಡ್ರಮ್ ಸೆಟ್, ಅಕ್ವೇರಿಯಮ್, ಡಿಜೆ ಮ್ಯೂಸಿಕ್ ಸೆಟ್ ವ್ಯವಸ್ಥೆ ಕಲ್ಪಿಸಲಾಗಿದೆ.

### ಉಳಿತಾಯ ಬ್ಯಾಂಕ್:

ಮಕ್ಕಳು ಹಣ ಉಳಿತಾಯ ಮಾಡಲು ಸಹಕಾರಿ ಬ್ಯಾಂಕ್ ವ್ಯವಸ್ಥೆ ಸ್ಥಾಪಿಸಲಾಗಿದ್ದು, ಮಕ್ಕಳೇ ನಿರ್ವಹಿಸುತ್ತಿದ್ದಾರೆ. ಬ್ಯಾಂಕ್ ವ್ಯವಸ್ಥಾಪಕ, ಉಪವ್ಯವಸ್ಥಾಪಕರನ್ನು ಆಯ್ಕೆ ಮಾಡಲಾಗಿದ್ದು, ವಿದ್ಯಾರ್ಥಿಗಳ ಮನೆಯಲ್ಲಿ ನೀಡಿದ ಪಾಕೆಟ್‌ಮನಿ ಅಥವಾ ಉಳಿತಾಯದ ಹಣವನ್ನು ಶಾಲೆಯಲ್ಲಿನ ತಮ್ಮ ಖಾತೆಯಲ್ಲಿ ಕೂಡಿಡುತ್ತಿದ್ದಾರೆ. ಇದಕ್ಕೆ ಸಂಬಂಧಿಸಿದ ಲೆಕ್ಕಪತ್ರಗಳನ್ನು ವಿದ್ಯಾರ್ಥಿಗಳೇ ನಿರ್ವಹಿಸುತ್ತಿರುವುದು ಗಮನಾರ್ಹವಾಗಿದೆ. ಈ ವರೆಗೆ ಸುಮಾರು 18000ಕ್ಕೂ ಹೆಚ್ಚು ಹಣ ಸಂಗ್ರಹಿಸಲಾಗಿದೆ. ಅತಿ ಹೆಚ್ಚು ಹಣ ಉಳಿತಾಯ ಮಾಡಿದ ಮಗುವಿಗೆ ಪ್ರತಿವರ್ಷ ಆಕರ್ಷಕ ಬಹುಮಾನ ನೀಡಲಾಗುತ್ತಿರುವುದು ಮಕ್ಕಳಲ್ಲಿ ಹಣ ಉಳಿತಾಯದ ಮಹತ್ವ ಹಾಗೂ ಉತ್ಸಾಹವನ್ನು ಹೆಚ್ಚಿಸಿದೆ. ಅಲ್ಲದೇ ಇದು ಬ್ಯಾಂಕಿಂಗ್ ವ್ಯವಹಾರದ ಕುರಿತು ಮೂಲಭೂತ ಪರಿಕಲ್ಪನೆ ಮೂಡಿಸುವ ಪ್ರಯತ್ನ ಇದಾಗಿದೆ.

### ಸ್ವಚ್ಛತೆಯ ಪಾಠ:–

ಶಾಲೆಗೆ ಸಂಬಂಧಿಸಿದ ಸುಸಜ್ಜಿತ ಅಡುಗೆ ಕೋಣೆಯಿದ್ದು, ಸ್ವಚ್ಛತೆಗೆ ಮೊದಲ ಆದ್ಯತೆ ನೀಡಲಾಗುತ್ತಿದೆ. ವಿವಿಧ ಸಂಘ ಸಂಸ್ಥೆ, ದಾನಿಗಳ ಸಹಕಾರದೊಂದಿಗೆ ಮಕ್ಕಳಿಗೆ ಬಿಸಿಯೂಟದಲ್ಲಿ ಇನ್ನಷ್ಟು ಪೌಷ್ಠಿಕ ತಿನಿಸುಗಳನ್ನು ನೀಡಲಾಗುತ್ತಿದೆ. ಕಸ, ತ್ಯಾಜ್ಯ ವಿಲೇವಾರಿ ಕುರಿತು ಮಕ್ಕಳಿಗೆ ಅರಿವು ಮೂಡಿಸಿರುತ್ತಾರೆ.

### ಪ್ರತಿಭೆಯ ಅನಾವರಣ:–

ಶಾಲೆಯ ವಿದ್ಯಾರ್ಥಿಗಳು ಪಠ್ಯೇತರ ಚಟುವಟಿಕೆಗಳಲ್ಲಿಯೂ ಸದಾ ಮುಂದಿದ್ದಾರೆ. ಕಳೆದ 6 ವರ್ಷದಿಂದ ಪ್ರತಿಭಾ ಕಾರಂಜಿ ಸ್ಪರ್ಧೆಗಳಲ್ಲಿ ಗಮನಾರ್ಹ ಸಾಧನೆ ಮಾಡುತ್ತಿದ್ದಾರೆ. ಜಾನಪದ ನೃತ್ಯ, ಭಗವದ್ಗೀತೆ ಪಠಣ, ರಸಪ್ರಶ್ನೆ, ಲಘುಸಂಗೀತ, ಕಂಠಪಾಠ ಸ್ಪರ್ಧೆ ಮೊದಲಾದ ಸ್ಪರ್ಧೆಗಳಲ್ಲಿ ಜಿಲ್ಲಾ ಮಟ್ಟದಲ್ಲಿ ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡಿದ್ದಾರೆ.

### ಹುಟ್ಟುಹಬ್ಬ ಆಚರಣೆ :–

ಶಾಲೆಯಲ್ಲಿರುವ ಎಲ್ಲಾ ಮಕ್ಕಳ ಹುಟ್ಟು ಹಬ್ಬವನ್ನು ಆಚರಿಸಲಾಗುತ್ತಿದೆ. ಮಕ್ಕಳು ಆರತಿ ಬೆಳಗಿ ಶುಭಾಷಯಗಳನ್ನು ಕೋರುತ್ತಾರೆ. ಪೋಷಕರು ಬಾರದೆ ಇರುವ ಸಂದರ್ಭದಲ್ಲಿ ಶಿಕ್ಷಕರೇ ನಿಂತು ಈ ಕಾರ್ಯ ನೆರವೇರಿಸುತ್ತಾರೆ. ಇದಲ್ಲದೇ ಮಕ್ಕಳೇ ಹಣ ಸಂಗ್ರಹಿಸಿ ಪೋಷಕರ ಸಹಕಾರ ಪಡೆದು ಶಿಕ್ಷಕರ ಹುಟ್ಟು ಹಬ್ಬವನ್ನು ಆಚರಿಸುತ್ತಾರೆ.

### ಮಕ್ಕಳಿಂದ ವ್ಯವಹಾರ ನಿರ್ವಹಣೆ:–

ಹಳ್ಳಿಯ ಮಕ್ಕಳಿಗೆ ಅನುಕೂಲವಾಗಲೆಂದು ಶಾಲೆಯಲ್ಲಿ ಶಿಕ್ಷಣಕ್ಕೆ ಸಂಬಂಧಿಸಿದ ವಸ್ತುಗಳನ್ನು ತಂದು ಶೇಖರಿಸಿ ಇಡಲಾಗಿದೆ. ನೋಟ್‌ಬುಕ್, ಪೆನ್ಸಿಲ್ ಮತ್ತಿತರರ ಅಗತ್ಯವಿರುವ ಮಕ್ಕಳು ಶಾಲೆ ಅಂಗಡಿಯಿಂದ ಖರೀದಿಸುತ್ತಾರೆ. ಅಂಗಡಿಯ ನಿರ್ವಹಣೆ ಜವಾಬ್ದಾರಿ ಹೊತ್ತಿರುವ ವಿದ್ಯಾರ್ಥಿಗೆ ಶಿಕ್ಷಕರ ಮಾರ್ಗದರ್ಶನ ಮಾಡುತ್ತಿದ್ದಾರೆ. ಈ ವ್ಯವಸ್ಥೆಯಿಂದ ವಿದ್ಯಾರ್ಥಿಗಳಿಗೆ ರಿಯಾಯಿತಿ ದರಲ್ಲಿ ಅಗತ್ಯ ವಸ್ತುಗಳು ಶಾಲೆಯಲ್ಲಿಯೇ ದೊರೆಯುವುದರ ಜೊತೆಗೆ ಮಕ್ಕಳಿಗೆ ವ್ಯವಹಾರದ ಜ್ಞಾನ ಹೆಚ್ಚುತ್ತಿದೆ.

### ಸಾಮಾಜಿಕ ಹೊಣೆಗಾರಿಕೆ ನಿರ್ವಹಣೆ:–

ಶಾಲೆಯ ಅಭಿವೃದ್ಧಿಗಾಗಿ ಗ್ರಾಮಸ್ಥರ ಸಹಕಾರ ಪಡೆಯುವಲ್ಲಿ ಯಶಸ್ವಿಯಾಗಿದೆ. ಶಾಲೆಯ ಆವರಣದ ಸ್ವಚ್ಛತೆ, ಅಭಿವೃದ್ಧಿ ಕಾರ್ಯಗಳಲ್ಲಿ ಪೋಷಕರು ಹಾಗೂ ಗ್ರಾಮಸ್ಥರು ಶ್ರಮದಾನ ನಡೆಸುತ್ತಾರೆ. ಶಾಲೆಯ ಸುಂದರತೆ ಹೆಚ್ಚಿಸಲು ಗೇಟ್‌ಗೆ ಹೊಂದಿಕೊಂಡು ಆಕರ್ಷಕ ಮಹಾದ್ವಾರ, ಕಾಂಪೌಂಡ್ ಮೇಲೆ ರಂಗೋಲಿ, ಹಸೆಚಿತ್ತಾರ ಬರೆಯಲಾಗಿದೆ. ಊರ ದನ ಕರುಗಳಿಗೆ ಕುಡಿಯುವ ನೀರಿನ ತೊಟ್ಟಿ ವ್ಯವಸ್ಥೆ ಮಾಡಲಾಗಿದೆ. ಶಾಲೆಯ ಅಕ್ಕಪಕ್ಕದ ಮನೆಗಳಿಗೆ, ಅಂಗನವಾಡಿಗೆ ನೀರಿನ ಕೊರತೆ ಉಂಟಾದಾಗ ಶಾಲೆಯ ಕೊಳವೆ ಬಾವಿಯ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ.

### ಗಣ್ಯರ ಭೇಟಿ:–

ಶಾಲೆಯ ಸರ್ವತೋಮುಖ ಬೆಳವಣಿಗೆಯನ್ನು ಗಮನಿಸಿ ಈ ವರೆಗೆ ಶಾಲೆಗೆ ಜಿಲ್ಲೆಯ ಹಲವು ಶಾಲೆಗಳ ವಿದ್ಯಾರ್ಥಿ, ಪೋಷಕರಷ್ಟೇ ಅಲ್ಲ, ರಾಜ್ಯದ ವಿವಿದೆಡೆಯಿಂದಲೂ ಭೇಟಿ ನೀಡಿದ್ದಾರೆ. ಶ್ರೀಯುತ ಕಿಮ್ಮನೆ ರತ್ನಾಕರ ಅವರು ರಾಜ್ಯದ ಶಿಕ್ಷಣ ಸಚಿವರಾಗಿದ್ದ ವೇಳೆ ಶಾಲೆಗೆ ಭೇಟಿ ನೀಡಿ ವಿದ್ಯಾರ್ಥಿಗಳ ಶೈಕ್ಷಣಿಕ ಗುಣಮಟ್ಟವನ್ನು ಪರಿಶೀಲಿಸಿ ಸಂತಸ ವ್ಯಕ್ತಪಡಿಸಿರುತ್ತಾರೆ. ಸ್ಥಳದಲ್ಲಿಯೇ ಶಾಲೆಗೆ ನೂತನ ಕಟ್ಟಡ ನಿರ್ಮಾಣಕ್ಕೆ ಅನುದಾನ ಬಿಡುಗಡೆ ಮಾಡಿಸಿರುತ್ತಾರೆ. ಶಿವಮೊಗ್ಗ ಜಿಲ್ಲೆಯ ಡಿಡಿಪಿಐ ಆಗಿದ್ದ ಶ್ರೀ ಮಚ್ಚಾದೋ, ಶ್ರೀಮತಿ ಸುಮಂಗಲ ಪಿ ಕುಚಿನಾಡ ಭೇಟಿ ನೀಡಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಡಯಟ್ ಉಪನ್ಯಾಸಕರು ವಿವಿಧ ತಾಲೂಕಿನ ಅಧಿಕಾರಿಗಳು ಬಿಆರ್‌ಪಿ, ಸಿಆರ್‌ಪಿಗಳು ಭೇಟಿ ನೀಡಿ ಶಾಲೆಯ ವ್ಯವಸ್ಥೆ ಕುರಿತು ಶ್ಲಾಘನೆ ವ್ಯಕ್ತ ಪಡಿಸಿರುತ್ತಾರೆ.

ಹೀಗೆ ಒಂದೇ ಎರಡೇ, ಎಂತಹ ಅದ್ಭುತ! ಎನಿಸುತ್ತದೆ ಅಲ್ಲವೇ ಇವೆಲ್ಲವೂ ನಿಜ. ಇವೆಲ್ಲವೂ ಕಾಣಸಿಗುವ ಶಾಲೆ ನೀರೇರಿ. ನೋಡಿ ಭೇಷ್ ಎಂದವರು ಶಿವಮೊಗ್ಗ ಜಿಲ್ಲಾಧಿಕಾರಿ. ಡಿಸೆಂಬರ್ 13, 2017 ರಂದು ಶಿವಮೊಗ್ಗ ಜಿಲ್ಲೆಯ ಜಿಲ್ಲಾಧಿಕಾರಿಯಾದ ಡಾ॥ ಎಮ್. ಲೋಕೇಶ್‌ರವರು ಈ ಶಾಲೆಗೆ ಭೇಟಿ ನೀಡಿ ಇಲ್ಲಿನ ಭೌತಿಕ ಮತ್ತು ಭೌದ್ಧಿಕ ಚಟುವಟಿಕೆಗಳನ್ನು ವೀಕ್ಷಿಸಿ ಮನದುಂಬಿ ಹರಸಿದ್ದಾರೆ. ಶಿಕ್ಷಕರು ಈ ಶಾಲೆಯನ್ನು ಪವಿತ್ರ ತಾಣವನ್ನಾಗಿ ಮಾಡಿದ್ದಾರೆ. ಕಲಿಕೋಪಕರಣಗಳನ್ನು ಜೋಡಿಸಿರುವುದನ್ನು ನಾನೆಲ್ಲೂ ನೋಡಿಲ್ಲ ಮಕ್ಕಳ ಕಲಿಕೆ ಉತ್ತಮವಾಗಿದೆ ಎಂದು ಭೇಟಿ ಸಂದರ್ಭದಲ್ಲಿ ಉಲ್ಲೇಖಿಸಿರುತ್ತಾರೆ. ಇದು ಈ ಶಾಲೆಯ ನೈಜತೆಗೆ ಹಿಡಿದ ಕೈಗನ್ನಡಿ. ಶಾಲೆಗೆ ಜನಪ್ರತಿನಿಧಿಗಳು, ಶಿಕ್ಷಣಾಸಕ್ತರು, ಸಂಘ ಸಂಸ್ಥೆ, ವಿದ್ಯಾಥಿ ಸಂಘಟನೆಗಳು, ಚಿಗುರು ತಂಡ, ಸಿಸ್ಕೋ ಸಂಭ್ರಮ ತಂಡ ಭೇಟಿ ನೀಡಿದ್ದು ಶಾಲೆಯ ಪ್ರಗತಿಗೆ ಕೈಜೋಡಿಸಿರುತ್ತಾರೆ.

### ಶಿಕ್ಷಣಾಸಕ್ತರ ಸಹಕಾರ:–

ಬೆಂಗಳೂರಿನ ಚಿಗುರು ತಂಡದವರು 2017–18ರಲ್ಲಿ ಹಾಗೂ ಸ್ಟಿಕ್ಸಿಸ್ ಟೆಕ್ನಾಲಜಿ 2018–19ರಲ್ಲಿ ಮಕ್ಕಳ ಕಲಿಕೆಗೆ ಬೇಕಾದ ವಸ್ತುಗಳನ್ನು ಉಚಿತವಾಗಿ ಕೊಡಿಸಿರುತ್ತಾರೆ. ಸಿಸ್ಕೋ ಸಂಭ್ರಮ ತಂಡ ಕಳೆದ 5 ವರ್ಷಗಳಿಂದ ಶಾಲಾ ಮಕ್ಕಳಿಗೆ ಮೊಳಕೆ ಕಟ್ಟಿದ ಕಾಳು, ಊಟಕ್ಕೆ ಉಪ್ಪಿನ ಕಾಯಿ, ಅತಿಥಿ ಶಿಕ್ಷಕರು, ಗ್ರಂಥಾಲಯಕ್ಕೆ ಪುಸ್ತಕ, ಟಿ. ಎಲ್. ಎಮ್. ದೂರದರ್ಶನ, ವಿಜ್ಞಾನ ಪ್ರಯೋಗಾಲಯ ನಿರ್ಮಾಣ ಸೇರಿದಂತೆ ಹತ್ತಾರು ವಿಧದಲ್ಲಿ ಸಹಕಾರವನ್ನು ನೀಡಿರುತ್ತಾರೆ. ಶಾಲೆಗೆ ಅನುಕೂಲವಾಗುವಂತೆ ದಾನಿಗಳು ನೀಡಿದ ಹಣದಲ್ಲಿ ಕೊಳವೆಬಾವಿ ನಿರ್ಮಾಣ ಮಾಡಲಾಗಿದೆ. ಪಂಪ್‌ಸೆಟ್ ಮತ್ತು ಪೈಪ್‌ಲೈನ್ ವ್ಯವಸ್ಥೆಗೆ ಸ್ಥಳೀಯ ಗ್ರಾಮ ಪಂಚಾಯತಿ, ತಾಲೂಕು ಪಂಚಾಯತಿಗಳು ಅನುದಾನ ಒದಗಿಸಿದೆ. ಎಲ್ಲರ ಸಹಕಾರವನ್ನು ಶಾಲೆಯ ಮುಖ್ಯ ಶಿಕ್ಷಕರಾದ ಶ್ರೀ ಗಜಾನನ ಎಂ.ಎನ್. ಅವರು ಮುಕ್ತ ಕಂಠದಿಂದ ನೆನೆಯುತ್ತಾರೆ. ಶಾಲೆಯ ಪ್ರಗತಿಗೆ ಸಹಕಾರ ನೀಡಿದ ಪ್ರತಿಯೊಬ್ಬರನ್ನೂ ಶ್ಲಾಘಿಸುತ್ತಾರೆ.

ಶಾಲೆಗೆ ಸಹಕಾರ ನೀಡಿದವರಿಗೆ ಶಾಲಾ ವತಿಯಿಂದ ಅಭಿನಂದನಾ ಪತ್ರ ನೀಡಿ ಗೌರವಿಸುತ್ತಾರೆ. ಪಾರದರ್ಶಕ ವ್ಯವಹಾರ ಮತ್ತು ಸೃಜನಶೀಲ ವ್ಯಕ್ತಿತ್ವದಿಂದ ಎಲ್ಲರ ವಿಶ್ವಾಸ ಗಳಿಸಿ ಶಾಲೆ ಮುನ್ನಡೆಸುತ್ತಿದ್ದಾರೆ. ಶಾಲಾ ಅವಧಿಯ ನಂತರ ವಿಶೇಷ ತರಗತಿಗಳನ್ನು ತೆಗೆದುಕೊಂಡು ಮಕ್ಕಳು ಉತ್ತಮವಾಗಿ ಕಲಿಯುವಂತೆ ಮಾಡಿ ಪೋಷಕರ ವಿಶ್ವಾಸಗಳಿಸಿ ಶಾಲೆಗೆ ಬರುವಂತೆ ಮಾಡಿಕೊಂಡಿರುತ್ತಾರೆ. ಶಿಕ್ಷಕರ, ಮಕ್ಕಳ, ಪೋಷಕರ ನಡುವಿನ ಬಾಂಧವ್ಯವನ್ನು ವೃದ್ಧಿಸುವಲ್ಲಿ

ನಿರಂತರ ಶ್ರಮ ವಹಿಸುತ್ತಿದ್ದಾರೆ. ಪ್ರಧಾನ ಮಂತ್ರಿಯವರ ಕನಸಾದ ಪೇಪರ್‌ಲೆಸ್ ವ್ಯವಹಾರವನ್ನು ಈ ಶಾಲೆ ಕಳೆದ 6 ವರ್ಷಗಳಿಂದ ಮಾಡಿಕೊಂಡು ಬಂದಿದೆ. ಪೋಷಕರಿಗೆ ಊರಿನ ನಾಗರಿಕರಿಗೆ ಎಸ್.ಡಿ.ಎಮ್.ಸಿ.ಯವರಿಗೆ ಗ್ರಾಮ ಪಂಚಾಯತ್ ಸದಸ್ಯರಿಗೆ ಹಳೆ ವಿದ್ಯಾರ್ಥಿಗಳಿಗೆ ಮೊಬೈಲ್ ಸಂದೇಶದ ಮೂಲಕ ಶಾಲೆಯಲ್ಲಿ ನಡೆಯುವ ಕೆಲಸ ಕಾರ್ಯಗಳ ಮಾಹಿತಿಯ ಜೊತೆಗೆ, ಕಾರ್ಯಕ್ರಮದ ಕರೆಯೋಲೆಯನ್ನು ತಲುಪಿಸುವಂತೆ ಮಾಡಿ ಎಲ್ಲರ ಮೆಚ್ಚುಗೆ ಗಳಿಸಿರುತ್ತಾರೆ.

**ಶಾಲಾವಧಿಗಳು :-**

ಈ ಶಾಲೆಯ ಇನ್ನೊಂದು ವಿಶೇಷತೆಯೆಂದರೆ ಮಕ್ಕಳು ಮತ್ತು ಶಿಕ್ಷಕರು ಸಂಜೆ 5.30 ರ ತನಕ ಶಾಲಾ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುತ್ತಾರೆ. ಶನಿವಾರದಂದು ಸಹಾ ಸಂಜೆ 4 ರ ತನಕ ಶಾಲೆ ತೆರೆದಿರುತ್ತದೆ. ಕೆಲವೊಂದು ರಜಾ ದಿನಗಳಲ್ಲಿಯೂ ಶಾಲೆಯಲ್ಲಿ ಕೆಲಸ ಕಾರ್ಯಗಳು ನಡೆಯುತ್ತಿರುತ್ತದೆ. ಪೋಷಕರ ಸಹಕಾರ ಪಡೆದು ಶಾಲಾವಧಿಯ ನಂತರದ ವೇಳೆಯಲ್ಲಿಯೂ ಶಿಕ್ಷಕರ ಮಾರ್ಗದರ್ಶನದ ಮೇರೆಗೆ ಮಾಡುತ್ತಿದ್ದಾರೆ.

**ಶಾಲಾ ನಿರ್ವಹಣೆ :-**

ಶಾಲೆಯ ದೈನಂದಿನ ಕಾರ್ಯಗಳನ್ನು ಮಕ್ಕಳೇ ತಂಡಗಳ ಮೂಲಕ ನಿರ್ವಹಿಸುತ್ತಾರೆ. ಕೈತೋಟಕ್ಕೆ ನೀರುಣಿಸುವುದು, ಶಾಲಾ ಆವರಣ ಸ್ವಚ್ಛತೆ, ಗಿಡಗಳನ್ನು ಸುಂದರೀಕರಣಗೊಳಿಸುವುದು, ಶಾಲೆಯ ಕಾರ್ಯಕ್ರಮಗಳ ನಿರ್ವಹಣೆ, ಶಾಲೆಯನ್ನು ಅಚ್ಚುಕಟ್ಟಾಗಿ ನಿರ್ವಹಿಸುವ ಈ ಎಲ್ಲಾ ಕಾರ್ಯಗಳು ಮಕ್ಕಳಿಂದಲೇ ಆಗುತ್ತಿದೆ. ರಜಾ ಸಮಯದಲ್ಲಿ ಅಡುಗೆಯವರು ಶಾಲಾ ಕೈತೋಟವನ್ನು ಹಾಳಾಗದಂತೆ ನೋಡಿಕೊಳ್ಳುತ್ತಾರೆ. ಪೋಷಕರ ಸಹಕಾರವಿದೆ.

**ಧ್ಯೇಯವಾಕ್ಯ :-**


'ನಮ್ಮ ಕನಸು ಎಲ್ಲರ ಮನಸ್ಸು ಶಾಲೆಗೆ ಶ್ರೇಯಸ್ಸು' ಎಂಬ ವಿಶೇಷವಾದ ಧ್ಯೇಯವಾಕ್ಯದೊಂದಿಗೆ ಶಾಲೆ ಸಮುದಾಯದ ಜೊತೆ ಜೊತೆಯಲಿ ಗುರುತಿಸಿ ಕೊಂಡಿದೆ. ಈ ಶಾಲೆಯು ಕಳೆದ 4 ವರ್ಷಗಳಿಂದ ಬೇರೆ ಶಾಲೆಗಳಿಗೆ ಮಾದರಿಯಾಗಿ ನಿಂತಿದೆ. ಭೌತಿಕ ಮತ್ತು ಬೌದ್ಧಿಕ ಬೆಳವಣಿಗೆಯಿಂದ ಇಲಾಖೆಯ ಹಾಗೂ ಸಮುದಾಯದ ನೆಚ್ಚಿನ ಶಾಲೆಯಾಗಿದೆ. ಅತಿಥಿಗಳನ್ನು ಆದರಿಸುವ ರೀತಿ, ಕೆಲಸ ಕಾರ್ಯಗಳ ಬಗ್ಗೆ ವಿವರಿಸುವ ರೀತಿ ಎಲ್ಲರಿಗೂ ಮೆಚ್ಚುಗೆಯಾಗಿದೆ. ತಾನು ಬೆಳೆಯುವುದರ ಜೊತೆ ತನ್ನವರನ್ನು ಬೆಳೆಸುವುದೇ ಶಿಕ್ಷಣ ಎನ್ನುವ ತತ್ವ ಶಾಲೆಯಲ್ಲಿ ಕಂಡುಬಂದಿದೆ.

**ಶಾಲೆಯ ಹಿರಿಮೆ:-**


ನೀರೇರಿ ಶಾಲೆ ಚಿಕ್ಕ ಶಾಲೆಯಾದರೂ ಚೊಕ್ಕ ಶಾಲೆ ಎಂಬ ಖ್ಯಾತಿ ಪಡೆದುಕೊಂಡಿದೆ. ಜಿಲ್ಲಾ ಮಟ್ಟದ ಧನ್ವಂತರಿ ಶಾಲೆ, ಪರಿಸರ ಮಿತ್ರ ಶಾಲೆ, ಅತ್ಯುತ್ತಮ ಶಾಲೆ, ತೋಟಗಾರಿಕಾ ಪ್ರಶಸ್ತಿ, ಜಾನಪದ ಪ್ರಶಸ್ತಿಗೆ ಭಾಜನವಾಗಿದೆ. ಶಾಲೆಯಲ್ಲಿನ ಚಟುವಟಿಕೆಗಳನ್ನು ಬಿತ್ತರಿಸುವ ಸಲುವಾಗಿ ಯೂಟೂಬ್ ಚಾನಲ್(glpsneereri) ಹಾಗೂ ಈಮೇಲ್ ಸೌಲಭ್ಯ ಕಲ್ಪಿಸಿಕೊಳ್ಳಲಾಗಿದೆ. ಪ್ರಾಥಮಿಕ ಹಂತದಲ್ಲಿ ಮಕ್ಕಳ ಸರ್ವತೋಮುಖ ವಿಕಾಸಕ್ಕೆ ವೇದಿಕೆಯಾಗಿರುವ ಶಾಲೆ ಪ್ರತಿಯೊಂದು ರಂಗದಲ್ಲೂ ಎಲ್ಲರಿಂದಲೂ ಮೆಚ್ಚುಗೆ ಗಳಿಸಿದ್ದು, ಇತರರಿಗೆ ಮಾದರಿಯಾಗಿದೆ. ದೇಶದ ಭವಿಷ್ಯದ ಪ್ರಜೆಗಳನ್ನು ಸಿದ್ಧಪಡಿಸುವ ಇಂತಹ ಶಾಲೆಗಳು ಇನ್ನಷ್ಟು ಬೆಳೆಯಲಿ ಎನ್ನುವುದು ನಮ್ಮ ಆಶಯ.

**"ಜೀವನವೇ ಒಂದು ಪ್ರಯೋಗಾಲಯ ಯಾರು ಹೆಚ್ಚು ಹೆಚ್ಚು ಪ್ರಯೋಗಗಳನ್ನು ಮಾಡುತ್ತಾರೋ ಅವರೇ ಜೀವನದಲ್ಲಿ ಗೆಲ್ಲುತ್ತಾರೆ "**

ಶಿವಮೊಗ್ಗ ಜಿಲ್ಲೆಯ ಹೆಮ್ಮೆಯ ಶಾಲೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಸದಾ ಪ್ರಯೋಗಗಳನ್ನು ಮಾಡುತ್ತಾ ತನ್ನದೇ ವಿಶೇಷತೆಗಳ ಆಗರವಾಗಿರುವ ಈ ಶಾಲೆಗೆ ಒಮ್ಮೆ ಭೇಟಿ ನೀಡಿ. ನಿಮಗೂ ಆಶ್ಚರ್ಯ ಎನಿಸದಿರದು. ಅಲ್ಲಿನ ಶಿಕ್ಷಕ ವೃಂದ, ಎಸ್.ಡಿ.ಎಮ್.ಸಿ., ಪೋಷಕರು ಹಾಗೂ ಭಾಗೀದಾರರೆಲ್ಲರಿಗೂ ಅಭಿನಂದನೆಗಳು...


2010 front view






ಅಂದಿನ ಶಾಲಾ ಮುಂಭಾಗ


ರಂಗೋಲಿ


ಹಳ್ಳಿ ಮನೆ


ಆಸನ




REDMI NOTE 5 PRO
MI DUAL CAMERA




ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ನೀರೇರಿ
ಸುಸ್ವಾಗತ


GLPS NEERERI


GAJA NEERERI




ನಿತ್ಯಪುಷ್ಪ


COLOURFUL
9591552224








ಜಾರುಬಂಡಿ




ಅಡುಗೆ ಕೋಣೆ



